ಶ್ರೀರಾಮಕೃಷ್ಣರ ಸಮನ್ವಯ ಸಿದ್ಧಾಂತ' (ವಿವೇಕಪ್ರಭ –ಜುಲೈ, ಆಗಸ್ಟ್ ೨೦೦೬) ಎಂಬ ವಿಷಯವಾಗಿ ಸಂಸ್ಕೃತದಲ್ಲಿ ಪ್ರವಚನವನ್ನು ಮಾಡಿದರು. ವೇದಾಂತದ ಕುರಿತು ಅವರ ಹೊಸ ರೀತಿಯ ವಿವರಣೆ ಮತ್ತು ಅವರ ಉಪನ್ಯಾಸದಲ್ಲಿ ಕಂಡುಬಂದ ಅಮೋಘ ಪಾಂಡಿತ್ಯವು ಅಲ್ಲಿನ ಪಂಡಿತರಿಗೆಲ್ಲ ಅಚ್ಚರಿಯನ್ನುಂಟುಮಾಡಿತು.

೧೯೦೬ರ ಆಗಸ್ಟ್ ತಿಂಗಳಲ್ಲಿ ಸ್ವಾಮಿ ರಾಮಕೃಷ್ಣಾನಂದರು ಅಮೆರಿಕದಿಂದ ಬಂದಿದ್ದ ಸ್ವಾಮಿ ಅಭೇದಾನಂದರ ಜೊತೆಗೆ ಬೆಂಗಳೂರು ಮತ್ತು ಮೈಸೂರಿಗೆ ಮತ್ತೊಮ್ಮೆ ಭೇಟಿಯನ್ನಿತ್ತರು. ವೇದಾಂತವನ್ನು ಕುರಿತು ಇಬ್ಬರೂ ಹಲವಾರು ಉಪನ್ಯಾಸಗಳನ್ನು ನೀಡಿದರು. ಇದರಿಂದ ಸ್ಫೂರ್ತಿಗೊಂಡ ಬೆಂಗಳೂರಿನ ಹಲವಾರು ಗಣ್ಯರು, ಅವರ ಭೇಟಿಯ ಸವಿನೆನಪಿಗಾಗಿ ಬೆಂಗಳೂರಿನಲ್ಲಿ ರಾಮಕೃಷ್ಣ ಮಠದ ಕೇಂದ್ರವನ್ನು ಪ್ರಾರಂಭಿಸಬೇಕೆಂದು ಪ್ರಾರ್ಥಿಸಿದರು. ಮೈಸೂರು ಪ್ರಾಂತ್ಯದ ದಿವಾನರಾಗಿದ್ದ ಶ್ರೀ ವಿ.ಪಿ.ಮಾಧವ ರಾವ್, ಬಸವನಗುಡಿ ಬಡಾವಣೆಯಲ್ಲಿ ಸುಮಾರು ಎರಡು ಎಕರೆ ನಿವೇಶನವನ್ನು, ಸರ್ಕಾರದ ವತಿಯಿಂದ ಇದಕ್ಕಾಗಿ ದಾನ ನೀಡಿದರು. ಸ್ವಾಮಿ ಅಭೇದಾನಂದರು ಮಠದ ನಿರ್ಮಾಣಕ್ಕೆ ಶಂಕುಸ್ಥಾಪನೆಯನ್ನು ನೆರವೇರಿಸಿದರು.

ಬೆಂಗಳೂರಿನ ಮಠದ ನಿರ್ಮಾಣಕ್ಕೆಂದು ಸ್ವಾಮಿ ರಾಮಕೃಷ್ಣಾನಂದರು ಮನೆಮನೆಗೆ ಹೋಗಿ ಚಂದಾಹಣವನ್ನು ಸಂಗ್ರಹಿಸಿದರು. ಒಮ್ಮೆ ಅವರು ಮತ್ತು ಸೋದರಿ ದೇವಮಾತಾ ಚಂದಾಹಣದ ಸಂಗ್ರಹಕ್ಕೆಂದು, ಮೈಸೂರು ಸರ್ಕಾರದ ಅಧಿಕಾರಿಯೊಬ್ಬರ ಮನೆಗೆ ಹೋದರು. ಅಧಿಕಾರಿಯು ಇವರಿಬ್ಬರನ್ನೂ ಸುಮಾರು ಹೊತ್ತು ಕಾಲ ಸುಮ್ಮನೆ ಕಾಯಿಸಿದನು. ಅನಂತರ ಸೋದರಿ ದೇವಮಾತಾ ಆ ಅಧಿಕಾರಿಯ ಬಳಿಸಾರಿ, ತಾವು ಬಂದ ಉದ್ದೇಶವನ್ನು ತಿಳಿಸಲು ಪ್ರಾರಂಭಿಸಿದರು. ಮಧ್ಯದಲ್ಲೇ ಅಧಿಕಾರಿಯು ಬಾಯಿಹಾಕಿ, "ಶ್ರೀರಾಮಕೃಷ್ಣರಿಗೆ ನೀವು ಏಕೆ ಇಷ್ಟು ಪ್ರಾಮುಖ್ಯತೆಯನ್ನು ಕೊಡುತ್ತಿದ್ದೀರಿ, ನನಗೆ ಅರ್ಥವಾಗುತ್ತಿಲ್ಲ" ಎಂದನು! ಅದಕ್ಕೆ ರಾಮಕೃಷ್ಣಾನಂದರು ಮುಗುಳ್ನಕ್ಕು, "ನಾನು ಅವರ ಸೇವಕನಾಗಿದ್ದೆ. ಅವರನ್ನು ಕುರಿತು ಕೊಂಚ ಹೇಳುವೆ" ಎಂದು ಶ್ರೀರಾಮಕೃಷ್ಣರನ್ನು ಕುರಿತು ಮಾತನಾಡಲು ಪ್ರಾರಂಭಿಸಿದರು. ಇದನ್ನು ಆಲಿಸಿದ ಅಧಿಕಾರಿಯ ಮನಸ್ಸು ಪರಿವರ್ತನೆಯಾಯಿತು. ಆತನು ಶ್ರೀರಾಮಕೃಷ್ಣರನ್ನು ಕುರಿತು ಹೆಚ್ಚು ಹೆಚ್ಚು ತಿಳಿದುಕೊಳ್ಳಲು ಉತ್ಸುಕನಾದನು, ಕಟ್ಟಡಕ್ಕೆಂದು ದೇಣಿಗೆಯನ್ನೂ ನೀಡಿದನು. ೧೯೦೯ರ ಜನವರಿ ೧೯ರಂದು ಸ್ವಾಮಿ ಬ್ರಹ್ಮಾನಂದರು ಈ ಕಟ್ಟಡವನ್ನು ಉದ್ಘಾಟಿಸಿದರು.

ಇದೇ ರೀತಿಯಲ್ಲಿ, ಮನೆಯಿಂದ ಮನೆಗೆ ಹೋಗಿ ಸಂಗ್ರಹಿಸಿದ ಚಂದಾ ಹಣದಿಂದ ೧೯೦೭ರಲ್ಲಿ ಚೆನ್ನೈನ ಮೈಲಾಪುರದಲ್ಲಿ ಮಠದ ಒಂದು ಸಣ್ಣಕಟ್ಟಡ ತಲೆಯೆತ್ತಿತು. ರಾಮಕೃಷ್ಣಾನಂದರ ಇನ್ನೊಂದು ಪ್ರಮುಖ ಕೊಡುಗೆಯೆಂದರೆ ಮಹಾಮಾತೆ ಶ್ರೀಶಾರದಾದೇವಿಯವರನ್ನು ಮತ್ತು ಶ್ರೀರಾಮಕೃಷ್ಣರ ಮಾನಸಪುತ್ರರಾದ ಸ್ವಾಮಿ ಬ್ರಹ್ಮಾನಂದರನ್ನು ದಕ್ಷಿಣ ಭಾರತಕ್ಕೆ ಕರೆತಂದದ್ದು. ೧೯೦೮ರಲ್ಲಿ ಸ್ವಾಮಿ ಬ್ರಹ್ಮಾನಂದರು ಮತ್ತು ೧೯೧೧ರಲ್ಲಿ ಶ್ರೀಶಾರದಾದೇವಿಯವರು ಚೆನ್ನೈ ಮತ್ತು ದಕ್ಷಿಣಭಾರತದ ಇತರ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರು.

ಒಮ್ಮೆ ಶ್ರೀರಾಮಕೃಷ್ಣರ ಜಯಂತಿ ಉತ್ಸವವು ಸಮೀಪಿಸುತ್ತಿತ್ತು. ಆದರೆ ಉತ್ಸವಕ್ಕಾಗಲಿ, 'ನಾರಾಯಣ ಸೇವೆ'ಗಾಗಲಿ ಬಿಡಿಗಾಸು ಕೂಡ ಇರಲಿಲ್ಲ. ಇಂಥ ಸಂದರ್ಭದಲ್ಲಿಯೇ ಮಠದಲ್ಲಿ ಭಕ್ತನೊಬ್ಬನು ರಾತ್ರಿ ಮಲಗಿದ್ದನು. ಮಧ್ಯರಾತ್ರಿ ಏನೋ ಶಬ್ದವಾಗಿ ಎಚ್ಚರಗೊಂಡನು. ರಾಮಕೃಷ್ಣಾನಂದರು ಏದುಸಿರು ಬಿಡುತ್ತಾ, ಪಂಜರದಲ್ಲಿ ಬಂಧಿಸಿಟ್ಟ ಸಿಂಹದಂತೆ ಅತ್ತಿಂದಿತ್ತ ಓಡಾಡುತ್ತಿದ್ದರು. ಬಡವರಿಗೆ ಸಲ್ಲುವ 'ನಾರಾಯಣ ಸೇವೆ'ಗೆ ಭಗವಂತನ ಸಹಾಯವನ್ನು ಯಾಚಿಸುತ್ತಿದ್ದರು. ಮಾರನೇ ದಿವಸವೇ ಮೈಸೂರು ಯುವರಾಜರು ಕಳುಹಿಸಿದ ದೊಡ್ಡ ಮೊತ್ತದ ಕಾಣಿಕೆಯೊಂದು ಅವರ ಕೈಸೇರಿತು. "ನಮಗೆ ಏನಾದರೂ ಬೇಕಾದರೆ ಅವರಿವರನ್ನು ಬಿಟ್ಟು ದೇವರನ್ನು ಕೇಳುವುದೇ ಒಳಿತು" ಎಂದು ಉದ್ಗಾರ ತೆಗೆದರು, ಸ್ವಾಮಿ ರಾಮಕೃಷ್ಣಾನಂದರು!

ಹೀಗೆ ಭಕ್ತರಲ್ಲಿ ಮಹಾಭಕ್ತರಾಗಿ ಸ್ವಾಮಿ ರಾಮಕೃಷ್ಣಾನಂದರು ಶ್ರೀರಾಮಕೃಷ್ಣದೇವರಿಗೆ, ಭೌತಿಕ ದೇಹದಲ್ಲೂ, ತದನಂತರವೂ ಅಪಾರ ಶ್ರದ್ಧೆಯಿಂದ ಸೇವೆ ಸಲ್ಲಿಸಿದರು. ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಸಾಮ್ರಾಜ್ಯವನ್ನು ಕಟ್ಟಲು ಅಹರ್ನಿಶಿ ಪರಿಶ್ರಮಿಸಿದರು. ಅಲ್ಲದೆ ಸ್ವಾಮಿ ವಿವೇಕಾನಂದರು ಬೋಧಿಸಿದ ಭಕ್ತಿಯೋಗ, ಕರ್ಮಯೋಗ, ರಾಜಯೋಗ ಮತ್ತು ಜ್ಞಾನಯೋಗಗಳ ಸಮನ್ವಯವನ್ನು ಅವರು ತಮ್ಮ ಜೀವನದಲ್ಲಿ ಅಚ್ಚುಕಟ್ಟಾಗಿ, ಸುಂದರವಾಗಿ, ಶ್ರೇಷ್ಠಮಟ್ಟದಲ್ಲಿ ಬೆಸೆದುಕೊಂಡಿದ್ದರು. ಸ್ವಾಮಿ ರಾಮಕೃಷ್ಣಾನಂದಜಿ ಅವರ ೧೫೦ನೇ ಜಯಂತಿ ಮಹೋತ್ಸವದ ಸಂದರ್ಭದಲ್ಲಿ, ಅವರಿಗೆ ಇದೂ, ನಮ್ಮ ಹೃದಯಪೂರ್ವಕ ಶ್ರದ್ಧಾಂಜಲಿ!

## ಓದುಗರ ವೇದಿಕೆ

ಸ್ವಾಮಿ ವಿವೇಕಾನಂದರ 150ನೇ ಜಯಂತಿ ಸಂದರ್ಭದಲ್ಲಿ 'ವಿವೇಕಪ್ರಭ'ವು ವಿಶೇಷ ಸಂಚಿಕೆಯೊಂದನ್ನು ಹೊರತರಲಿದೆ. ಇದಕ್ಕಾಗಿ ಓದುಗರಿಂದ ಈ ಕೆಳಗಿನ ವಿಷಯದ ಮೇಲೆ ಸಂಕ್ಷಿಪ್ತ ಬರಹಗಳನ್ನು ಆಹ್ವಾನಿಸುತ್ತಿದ್ದೇವೆ.

ವಿಷಯ: ಸ್ವಾಮಿ ವಿವೇಕಾನಂದರಿಂದ ನಾನು ಪಡೆದ ಸ್ಫೂರ್ತಿ ಮತ್ತು ಅವರು ನನ್ನ ಮೇಲೆ ಬೀರಿದ ಪ್ರಭಾವ

ನಿಮ್ಮ ಬರಹಗಳು ಫುಲ್‌ಸ್ಕೇಪ್ ಒಂದು ಪುಟದ ಮೇಲೆ ಇರಬಾರದು. ಸಾಧ್ಯವಾದಷ್ಟೂ ಸ್ವಂತ ಅನುಭವದ ವಿವರಣೆ ಇರುವ ಬರಹಗಳಿಗೆ ಮಾತ್ರ ಆದ್ಯತೆ ನೀಡಲಾಗುವುದು. ನಿಮ್ಮ ಬರಹಗಳನ್ನು ಕಳಿಸಲು ಕಡೆಯ ದಿನಾಂಕ : 1.8.2012.

'ಓದುಗರ ವೇದಿಕೆ' ವಿವೇಕಪ್ರಭ ವಿಭಾಗ, ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು – 570 020

# ಕತ್ತಲಿನಿಂದ ಬೆಳಕಿನೆಡೆಗೆ

ರಚನೆ : ಸೇವಂತಿ ಡಿ. ರೈ

**ಸದ್ಗುರುವು ಶಿಷ್ಯನನ್ನು ಕತ್ತಲಿನಿಂದ ಬೆಳಕಿಗೆ ಕರೆದೊಯ್ಯುತ್ತಾನೆ. ಮಹಾತ್ಮರ ಜೀವನದಲ್ಲಿ ಇದು ಕಂಡುಬರುತ್ತದೆ. ಅಲ್ಲಮಪ್ರಭುಗಳ ಜೀವನದಲ್ಲಿ ನಡೆದ ಇಂತಹ ರೋಚಕ ಘಟನೆಯೊಂದು ಇಲ್ಲಿ ಸುಂದರ ನಾಟಕದ ರೂಪವನ್ನು ತಾಳಿದೆ. ಇದನ್ನು ರಚಿಸಿದ ಲೇಖಕಿ, ನಿವೃತ್ತ ಕಾಲೇಜು ಪ್ರಾಧ್ಯಾಪಕಿ. ಸಾಹಿತ್ಯಾಸಕ್ತರಾಗಿರುವ ಇವರು ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರಾಗಿರುವ ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿವೆ.**

*(ಇಂದಿಗೆ ಸುಮಾರು ೮೫೦ ವರ್ಷಗಳ ಹಿಂದೆ ಶ್ರೀಶೈಲಕ್ಕೆ ಹೋಗುವ ದಾರಿಯಲ್ಲಿ ಒಂದು ಗೊಂಡಾರಣ್ಯ. ಕಾರ್ತಿಕ ಮಾಸದ ಕೃಷ್ಣ ಪಕ್ಷದ ಕತ್ತಲು ಆವರಿಸಿದೆ. ಹೀಗಾಗಿ ಆ ಅರಣ್ಯ ಇನ್ನೂ ಭಯಂಕರವಾಗಿ ಕಾಣಿಸುತ್ತಿತ್ತು. ಕ್ರೂರ ಮೃಗಗಳ ಘರ್ಜನೆ, ಕೀಟಗಳ ಝೇಂಕಾರಗಳ ನಡುವೆ ಬೇಟೆನಾಯಿಗಳ ಬೊಗಳಾಟ ಕೇಳಿಸುತ್ತಿದೆ.*

*ಅಲ್ಲಮಪ್ರಭು ಮೆಲ್ಲನೆ ಪ್ರವೇಶಿಸುವನು. ಮುಂದೆ ಚಾಚಿದ ಎಡಗೈಯಲ್ಲಿ ಶಿವಲಿಂಗವಿದೆ. ದೂರದಿಂದ ವಚನವೊಂದು ಮೆಲ್ಲನೆ ಕೇಳಿಸುತ್ತಿದೆ. ಅಲ್ಲಮಪ್ರಭು ರಂಗವನ್ನು ಪ್ರವೇಶಿಸಿದಾಗ ಅದು ಗಟ್ಟಿಯಾಗಿ ಕೇಳಿಸುವುದು. ವಚನ ಹೇಳುತ್ತಾ ಅಲ್ಲಮನು ಮುಂದೆ ಸಾಗಿ ರಂಗದ ಮಧ್ಯಭಾಗಕ್ಕೆ ತಲುಪುತ್ತಾನೆ.)*

**ಅಲ್ಲಮ:** *(ವಚನವನ್ನು ಹಾಡುತ್ತಿರುವನು)*

**ಎತ್ತಣ ಮಾಮರ ಎತ್ತಣ ಕೋಗಿಲೆ?**
**ಎತ್ತಣಿಂದೆತ್ತ ಸಂಬಂಧವಯ್ಯಾ!**
**ಬೆಟ್ಟದ ನೆಲ್ಲಿಯ ಕಾಯಿ,**
**ಸಮುದ್ರದೊಳಗಣ ಉಪ್ಪು**
**ಎತ್ತಣಿಂದೆತ್ತ ಸಂಬಂಧವಯ್ಯಾ ?**
**ಗುಹೇಶ್ವರ ಲಿಂಗಕ್ಕೆಯೂ, ಎನಗೆಯು**
**ಎತ್ತಣಿಂದೆತ್ತ ಸಂಬಂಧವಯ್ಯ**
**ಎತ್ತಣ ಮಾಮರ...**

*(ವಚನ ಮುಗಿಯುವಷ್ಟರಲ್ಲೇ ಕಿರಾತಕ ರಾಜನ ವಿಕಟ ನಗು ಕೇಳುವುದು. ಅಲ್ಲಮ ಅದನ್ನು ಗಮನಿಸದೆ ನಿರ್ಭೀತನಾಗಿ ಮುಂದೆ ಸಾಗುವನು.)*



**ಕಿರಾತಕ ರಾಜ:** ನಿಲ್ಲು, ಏ ಹುಚ್ಚಾ, ನಿಲ್ಲು.

*(ಅಲ್ಲಮ ನಿಲ್ಲದೆ ಮುಂದೆ ಸಾಗುತ್ತಿರಲು, ಕಿರಾತಕನು ಆತನ ಮುಂದಕ್ಕೆ ಹೋಗಿ, ತನ್ನ ಕತ್ತಿಯನ್ನು ಅಡ್ಡಹಿಡಿದು ತಡೆಯುವನು.)*

**ಕಿರಾತಕ ರಾಜ:** ನಾನು 'ನಿಲ್ಲು' ಎಂದಾಗ ನಿಲ್ಲದೆ ನನ್ನನ್ನು ಧಿಕ್ಕರಿಸಿ ಮುಂದೆ ಸಾಗುವ ನಿನಗೆ ಎಷ್ಟೋ ಧೈರ್ಯ! ಯಾರೋ ನೀನು? ತಿರುಕನೋ, ಹುಚ್ಚನೋ ಅಥವಾ ಕಣಿ ಹೇಳುವ ಬುಡುಬುಡುಕೆಯವನೋ?

**ಅಲ್ಲಮ:** ಹೌದು, ನಾನೊಬ್ಬ ಹುಚ್ಚ, ಎಲ್ಲೆಲ್ಲೂ ಶಿವನನ್ನೇ ಕಾಣಬಯಸುವ ಹುಚ್ಚ. ವಿಶ್ವವೇ ನನ್ನದಾಗಿರುವ ದೊಡ್ಡ ತಿರುಕ ನಾನು.

**ಕಿರಾತಕ ರಾಜ:** ಹೂಂ. ನನ್ನ ಅಪ್ಪಣೆಯಿಲ್ಲದೆ ನನ್ನ ರಾಜ್ಯವನ್ನು ಏಕೆ ಪ್ರವೇಶಿಸಿದೆ?

**ಅಲ್ಲಮ:** ಓಹೋ, ಈ ಕಾಡು ನಿನ್ನ ರಾಜ್ಯವೋ? ಹಾಗಾದರೆ ನನ್ನ ಮಾತು ಕೇಳು, ಓ ಕಾಡಿನ ರಾಜನೇ. ಈ ಶಿವರಾಜ್ಯದಲ್ಲಿ ಸಂಚರಿಸಲು ಯಾರ ಅಪ್ಪಣೆಯೂ ಬೇಡ, ತಿಳಿಯಿತೇ?

**ಕಿರಾತಕ ರಾಜ :** ಶಿವ ಶಿವ ಎಂದು ಏಕೆ ಬಡಬಡಿಸುತ್ತೀಯೆ. ಇನ್ನೊಮ್ಮೆ ಆ ಶಿವನ ಹೆಸರೆತ್ತಿದರೆ, ನಿನ್ನ ರುಂಡವನ್ನು ಹಾರಿಸಿಬಿಡುವೆ.

*(ಕಿರಾತಕನ ಉದ್ಧಟತನಕ್ಕೆ ವಿಚಲಿತನಾಗದ ಅಲ್ಲಮ ಮುಗುಳ್ನಕ್ಕು ಅವನನ್ನೇ ದಿಟ್ಟಿಸುವನು. ಅಲ್ಲಮನ ದೃಷ್ಟಿಯನ್ನು ಎದುರಿಸಲಾಗದೆ ಕಿರಾತಕನು ಬೇರೆಡೆಗೆ ಮುಖ ತಿರುಗಿಸುವನು.)*

**ಕಿರಾತಕ ರಾಜ:** *(ಸ್ವಗತ)* ಅದೇಕೋ ಈತನನ್ನು ಕಂಡು ನನ್ನ ಮನಸ್ಸು ಚಂಚಲಗೊಂಡಿದೆ. ನನ್ನಲ್ಲಿದ್ದ ಧೈರ್ಯವೂ ಇಲ್ಲದಂತಾಗಿದೆ. ಇಂದೇಕೆ ನನಗೆ ಹೀಗಾಗುತ್ತಿದೆ? ಛೇ, ಛೇ, ನನ್ನನ್ನು ನಾನು ಸುಧಾರಿಸಿಕೊಳ್ಳಬೇಕು. *(ಗಟ್ಟಿಯಾಗಿ)* ಈಗ ನಾನು ನಿನ್ನನ್ನು ಕೊಲ್ಲುವುದಿಲ್ಲ. *(ಮಾತಿನ ಜೋರು ಕಡಿಮೆಯಾಗಿದೆ)* ನಾಳಿನ ಸೂರ್ಯೋದಯಕ್ಕೆ ಸರಿಯಾಗಿ ಮಿಕ್ಕ ನಾಲ್ವರೊಡನೆ ನಿನ್ನನ್ನೂ ಬಲಿ ಕೊಡುವೆನು.

**ಅಲ್ಲಮ:** *(ವಿಚಲಿತನಾಗದೆ ತುಂಟ ನಗು ಬೀರುತ್ತಾ)* ನಿನ್ನ ಕತ್ತಿಯಿಂದ ಈ ದೇಹವನ್ನು ಸೀಳಲು ನಿನಗೆ ಸಾಧ್ಯವೇ?

**ಕಿರಾತಕ ರಾಜ:** ಏನು! ಏನೆಂದೆ? ಸಾಧ್ಯವೇ ನನಗೆ! ಹಾ ಹಾ ಹಾ! ಎಲೋ ತಲೆತಿರುಕ, ನಾನ್ಯಾರೆಂದು ತಿಳಿದಿರುವೆ?



ಚಿತ್ರ :
ವಿವೇಕ ಪ್ರಭು

**ಅಲ್ಲಮ:** ನೀನೊಬ್ಬ ಮೂರ್ಖ, ಕಾಡು ಮನುಷ್ಯನೆಂಬುದು ನಿನ್ನನ್ನು ನೋಡಿದರೇ ತಿಳಿಯುವುದು.

**ಕಿರಾತಕ ರಾಜ:** ನನ್ನನ್ನು ಮೂರ್ಖ ನೆನ್ನುವ ನಿನ್ನ ರುಂಡವನ್ನು ಈಗಲೇ ಹಾರಿಸುವೆನು. *(ಕತ್ತಿಯನ್ನು ಎತ್ತುವನು. ಅಲ್ಲಮ ಆತನ ಕಣ್ಣನ್ನೇ ದಿಟ್ಟಿಸುವನು. ಮೇಲೆತ್ತಿದ ಕಿರಾತಕನ ಕೈ ಅಲ್ಲೇ ನಿಲ್ಲುವುದು. ಅಲ್ಲಮನ ದೃಷ್ಟಿಯನ್ನು ಎದುರಿಸಲಾರದೆ ಕಿರಾತಕ ರಾಜ ಮುಖ ಕೆಳಗೆ ಮಾಡುವನು. ಕತ್ತಿ ಕೈಯಿಂದ ಜಾರಿ ಕೆಳಕ್ಕೆ ಬೀಳುವುದು.)*

**ಅಲ್ಲಮ:** ಅದೇಕೆ ಸುಮ್ಮನಾದೆ? ನಿನಗೆ ಶಕ್ತಿ ಇದ್ದರೆ ಈ ರುಂಡದಿಂದ ಮುಂಡ ವನ್ನು ಬೇರ್ಪಡಿಸು, ನೋಡೋಣ.

**ಕಿರಾತಕ ರಾಜ:** ಎಲವೋ ಮೂರ್ಖ, ನನ್ನ ಶಕ್ತಿಯನ್ನು ಹೀಯಾಳಿಸಬೇಡ. ಹುಲಿ, ಸಿಂಹಗಳನ್ನು ಬರೀ ಕೈಯಲ್ಲಿ ಗುದ್ದಿ ಕೊಂದಿರುವ ನನಗೆ, ಆನೆಯ ಸೊಂಡಿಲಲ್ಲಿ ಕುಳಿತು ಅದರ ದಂತವನ್ನು ಮುರಿದ ನನಗೆ, ಇದೇನೂ ಅಸಾಧ್ಯವಲ್ಲ.

**ಅಲ್ಲಮ:** ನನ್ನ ಈ ದೇಹಕ್ಕೆ ನಿನ್ನ ಕತ್ತಿಯಿಂದ ಹೊಡೆಯಲು ಸಾಧ್ಯವೇ?

**ಕಿರಾತಕ ರಾಜ:** ಏನೆಂದೆ! ನನ್ನಿಂದ ಸಾಧ್ಯವೇ ಎಂದು ಕೇಳಲು ನಿನಗೆಷ್ಟೋ ಧೈರ್ಯ! ನನ್ನ ಶಕ್ತಿಯನ್ನು ಅವಮಾನ ಮಾಡದಿರು, ಅದರ ಬಲವನ್ನು ನೀನು ನೋಡಿಲ್ಲ. ನೋಡು, ಈ ಕತ್ತಿಯಿಂದ ನಿನ್ನ ದೇಹಕ್ಕೆ ಹೊಡೆಯುವೆ. *(ಅಲ್ಲಮನ ದೇಹಕ್ಕೆ ಕತ್ತಿಯಿಂದ ಹೊಡೆಯಲು, ಗಾಳಿಯಲ್ಲಿ ಹೊಡೆದಂತಾಗಿ ಆಶ್ಚರ್ಯ ದಿಂದ ನಿಲ್ಲುವನು. ಅನೇಕ ಬಾರಿ ಹೊಡೆದರೂ, ಬಯಲಿನಲ್ಲಿ ಬೀಸಿದಂತೆ ಕತ್ತಿ ಅಲ್ಲಮನ ದೇಹವನ್ನು ಹಾದು ಬರುವುದು. ಕಿರಾತಕ ರಾಜ ಆಯಾಸ ದಿಂದ, ಆಶ್ಚರ್ಯದಿಂದ ಅಲ್ಲೇ ಬಂಡೆಯ ಮೇಲೆ ಕೂರುವನು.)*

**ಅಲ್ಲಮ:** ಏನಾಯಿತು, ಕಿರಾತಕ ರಾಜ? ಈ ತಿರುಕನ ದೇಹಕ್ಕೆ ಹೊಡೆಯುವ ಶಕ್ತಿಯೂ ಇಲ್ಲವೇ ನಿನ್ನಲ್ಲಿ! ಹುಲಿ ಸಿಂಹಗಳನ್ನು ಬರೇ ಕೈಯಲ್ಲಿ ಗುದ್ದಿ ಕೊಂದಿರುವ ನಿನಗೆ, ಈ ತಿರುಕನ ದೇಹ ದಿಂದ ರುಂಡವನ್ನು ಬೇರ್ಪಡಿಸಲು ಅಸಾಧ್ಯವಾಗಿಹೋಯಿತೋ?

**ಕಿರಾತಕ ರಾಜ:** ಏ ಬಾಯಿಬಡುಕ ತಿರುಕ, ನನ್ನನ್ನು ಹಂಗಿಸಬೇಡ. ರಕ್ತ ಮಾಂಸ ಮೂಳೆಗಳೇ ಇಲ್ಲದ ದೇಹ ಹೊಂದಿರುವಂತೆ ಕಾಣುವ ಮಾಟಗಾರ ನೀನು. ನಿನ್ನ ಮಾಯಾಮಾಟದಿಂದ ನನ್ನಲ್ಲೇನೋ ಆಗುತ್ತಿದೆ. ನನಗೆ ಶಕ್ತಿಯೇ ಇಲ್ಲದಂತಾಗುತ್ತಿದೆ. *(ಕತ್ತಿ ಕೈಯಿಂದ ಜಾರಿ ಕೆಳಗೆ ಬೀಳುವುದು)* (ಸ್ವಗತ) ನನ್ನ ಕೈ ನಡುಗುತ್ತಿದೆ. ಈ ತಿರುಕನ ದೃಷ್ಟಿಯನ್ನು ನನಗೆ ಎದುರಿಸಲಾಗುತ್ತಿಲ್ಲ. ಎಂದೂ ಸೋಲನ್ನು ಕಾಣದ ನನಗೆ ಇಂದು ಇವನ ಮುಂದೆ ಸೋಲಿನ ಅನುಭವವಾಗುತ್ತಿದೆ. ನನಗೇನಾಗಿದೆ ಇಂದು! *(ತಲೆ ಕೆಳಗೆ ಮಾಡುವನು)*

**ಅಲ್ಲಮ:** ಅಯ್ಯಾ, ಸಹೋದರ, ಏನನ್ನು ಚಿಂತಿಸುತ್ತಿರುವೆ?

**ಕಿರಾತಕ ರಾಜ:** ಏನೆಂದೆ! ಸಹೋದರ ಎಂದೆಯಾ! ನಾನು ನಿನ್ನ ಬಂಧು ಹೇಗಾದೆ? ಮೂರ್ಖ, ನಾನು ರಾಜ! ಕಾಡಿನ ರಾಜ, ತಿಳಿಯಿತೇ? ನೀನೋ ಒಬ್ಬ ತಿರುಕ.

**ಅಲ್ಲಮ:** ಹೌದು, ನಾನು ತಿರುಕ, ನೀನೂ ತಿರುಕ. ನಾನೇ ನೀನು, ನೀನೇ ನಾನು, ನಾನೂ ನೀನೂ ಸಹೋದರರು.

**ಕಿರಾತಕ ರಾಜ:** ಛೀ ಛೀ, ಏ ಮಾಟಗಾರ, ನಿನ್ನ ತಲೆಹರಟೆ ಬೇಡ.

**ಅಲ್ಲಮ:** ಇಲ್ಲಿ ಕೇಳು, ನೀನೋ ನಿನ್ನ ಹೊಟ್ಟೆಗಾಗಿ ಬೇಟೆಯಾಡಲು ಅಲೆ ದಾಡುವ ತಿರುಕ. ನಾನೋ, ಶಿವನನ್ನು ಎಲ್ಲರೊಳಗೂ ಕಾಣುತ್ತಾ ಅಲೆದಾಡುವ ತಿರುಕ.

**ಕಿರಾತಕ ರಾಜ:** ಅದೇನು, ಮಾತು ಮಾತಿಗೂ ಶಿವನೆನ್ನುತ್ತಿ. ಕಣ್ಣಿಲ್ಲದ, ಕಿವಿಯಿಲ್ಲದ, ಎಲ್ಲೂ ಕಾಣದ ಶಿವನನ್ನು ಅರಸುತ್ತಾ ನಿನ್ನ ಜೀವಮಾನವನ್ನು ಹೀಗೆ ಹಾಳು ಮಾಡಿಕೊಳ್ಳುತ್ತಿರುವೆ, ಏಕೆ?

**ಅಲ್ಲಮ:** ನಾನು ಮತ್ತೇನು ಮಾಡ ಬೇಕೆನ್ನುವೆ?

**ಕಿರಾತಕ ರಾಜ:** ನೋಡು, ನನ್ನತ್ತ ನೋಡು. ನಾನು ಎಂಥ ರಾಜಾಧಿರಾಜ ಗೊತ್ತೇ? ಈ ಜಗತ್ತಿನ ರಾಜರೆಲ್ಲಾ ನನ್ನ ಹೆಸರೆತ್ತಿದರೆ ನಡುಗುವರು. ನನ್ನನ್ನು ಕಂಡರೆ ಸಾಷ್ಟಾಂಗ ಎರಗುವರು. ನಾನು ಕೇಳಿದುದನ್ನು ಕೈಯಾರೆ ಕೊಡುವರು. ದೇವಲೋಕ, ನರಲೋಕಗಳ ಭಯ

ಇಲ್ಲದೆ ನಾನೇ ನಾನಾಗಿ ಮೆರೆಯುತ್ತಿದ್ದೇನೆ. ಈ ಜಗತ್ತಿನಲ್ಲಿ ನಾನೇ ದೊಡ್ಡವನು ಎಂದು ಹೇಳಿಕೊಳ್ಳಲು ಎಷ್ಟು ಹೆಮ್ಮೆ ಎನಿಸುತ್ತಿದೆ, ಬಲ್ಲೆಯಾ?

**ಅಲ್ಲಮ:** ಬಲ್ಲೆ, ಕಿರಾತಕ ರಾಜ! ಇಲ್ಲಿ ಕೇಳು

**ದೇವಲೋಕದವರ ತೃಣವೆಂಬೆ**
**ಮರ್ತ್ಯಲೋಕದವರ ಕ್ಷಣವೆಂಬೆ**
**ಅಹಂಕಾರವೆಂಬ ಶೃಂಗಾರದ ಮಾಣೆ**
**ನಾನಲ್ಲದನ್ಯವನಲ್ಲೆಂಬೆ**
**ಗುಹೇಶ್ವರ ಲಿಂಗ ತಾನೆಯಾಗಿ !**

ಕಿರಾತಕರೊಡೆಯಾ, ನಿನ್ನನ್ನು ನೀನು ಬಹಳಷ್ಟು ಹೊಗಳಿಕೊಂಡೆಯಲ್ಲಾ. ನನಗೆ ನಿನ್ನ ಶಕ್ತಿಯನ್ನು ನೋಡಬೇಕಾಗಿದೆ. ನನ್ನ ಕೈಮೇಲೆ ಇರುವ ಈ ಶಿವಲಿಂಗವನ್ನು ಎತ್ತಬಲ್ಲೆಯಾ?

**ಕಿರಾತಕ ರಾಜ:** ಮಾತುಮಾತಿಗೂ ನನ್ನನ್ನು ಮೂದಲಿಸಿ ಕೆಣಕುತ್ತಿರುವೆ. ಮದಗಜದ ಸೊಂಡಿಲನ್ನೇ ಮುರಿದವನು ನಾನು, ಹಸಿದ ಹೆಬ್ಬುಲಿಯ ಬೆನ್ನನ್ನೇರಿದವನು ನಾನು, ನಿನ್ನ ಎಡಗೈಯಲ್ಲಿರುವ ಕಲ್ಲಿನ ಲಿಂಗವನ್ನು ಎತ್ತಲಾರೆನೆ! ಹಾ, ಹಾ, ಹಾ … ಇಲ್ಲಿ ನೋಡು. (*ಕಿರಾತಕನು ಶಿವಲಿಂಗವನ್ನು ಸ್ಪರ್ಶಿಸಿದ ಕೂಡಲೆ ವಿದ್ಯುದಾಘಾತವಾದಂತೆ ಹಿಂದಕ್ಕೆ ಸರಿಯುವನು. ಪುನಃ ಪುನಃ ಪ್ರಯತ್ನಿಸಿದರೂ ಅವನು ಲಿಂಗವನ್ನು ಅಲ್ಲಮನ ಕೈಯಿಂದ ಕೀಳಲು ಸಾಧ್ಯವಾಗುವುದಿಲ್ಲ. ಕಡೆಗೆ, ನಿಸ್ಸಹಾಯಕನಾಗಿ ಆಯಾಸಗೊಂಡು, ಕಲ್ಲುಬಂಡೆಯ ಮೇಲೆ ಕುಳಿತುಕೊಳ್ಳುವನು.*)

**ಅಲ್ಲಮ:** ಅದೇಕೆ ಹಾಗೆ ಕುಳಿತಿರುವೆ, ಕಿರಾತಕ ರಾಜ! ಮದಗಜದ ಸೊಂಡಿಲನ್ನು ಮುರಿದ ನೀನು ಈ ಲಿಂಗವನ್ನು, ಅದೂ ಈ ತಿರುಕನ ಕೈಯ ಮೇಲೆ ಇದ್ದುದನ್ನು, ಎತ್ತಲಾರೆಯಾ! ನಿನ್ನ ಪೌರುಷ ಎಲ್ಲಿ ಹೋಯಿತು?

**ಕಿರಾತಕ ರಾಜ:** ಎಲವೋ ಜಂಗಮ, (*ಮಾತಿನಲ್ಲಿರುವ ಜೋರು ತುಂಬಾ ಕಡಿಮೆಯಾಗಿದೆ*) ನನ್ನನ್ನು ನೀನು ಮೂದಲಿಸಿದರೂ ಸಿಟ್ಟೇಗೇಳದಷ್ಟು ನಾನು ನಿರ್ಬಲನಾಗಿದ್ದೇನೆ. (*ವ್ಯಥೆಯಿಂದ*) ಈ ಜಗತ್ತನ್ನೇ ಗೆದ್ದ ನಾನು, ನಿನ್ನ ಮುಂದೆ ಅಸಹಾಯಕನಾಗಿದ್ದೇನೆ. ನನ್ನನ್ನು ನೋಡಿದ ಮಾತ್ರಕ್ಕೆ ಹುಲುಮಾನವರು ಹೆದರಿ ದಿಕ್ಕಾಪಾಲಾಗಿ ಓಡಿಹೋಗುವರು. ಆದರೆ ನನ್ನನ್ನು ಕಂಡು ಹೆದರದವನು ನೀನೊಬ್ಬನೇ, ಅದೂ ಸಂನ್ಯಾಸಿ. ನೀನ್ಯಾರೋ ರಕ್ತಮಾಂಸಗಳೇ ಇಲ್ಲದ ದೇಹ ಇರುವ ಮಾಟಗಾರನಿರಬೇಕು. ಹೇಳು, ನೀನ್ಯಾರೆಂದು.

**ಅಲ್ಲಮ :** ಆಗಲೇ ಹೇಳಿದೆನಲ್ಲ, ನಾನು ನಿನ್ನ ಸಹೋದರ ಬಂಧು, ತಿರುಕ ಎಂದು.

**ಕಿರಾತಕ ರಾಜ:** ಅಲ್ಲ, ಅಲ್ಲ. ಅದು ಸಾಧ್ಯವೇ ಇಲ್ಲ.

**ಅಲ್ಲಮ:** ಹೌದು, ನಾನು ಅಲ್ಲ, 'ಅಲ್ಲಮ' ತಿಳಿಯಿತೆ?

**ಕಿರಾತಕ ರಾಜ:** ಏನು, ನೀನು ಅಲ್ಲಮನೇ! ಜನರು ಹೊಗಳುವ ಅಲ್ಲಮಪ್ರಭುವೇ? ನಿನ್ನ ಹೆಸರೇನೋ ಸುಜ್ಞಾನಿ ಎಂಬ ಅರ್ಥಕೊಡುವುದು. ಆದರೂ ನೀನು ಮೂರ್ಖಶಿಖಾಮಣಿಯಂತೆ ಕಾಣಿಸುತ್ತಿರುವೆಯಲ್ಲಾ?

**ಅಲ್ಲಮ:** ಹಾಗಾದರೆ ನಿನ್ನೆಣಿಕೆಯಲ್ಲಿ ಮೂರ್ಖರು ಯಾರು?

**ಕಿರಾತಕ ರಾಜ:** ಶಿವಭಕ್ತರು.

**ಅಲ್ಲಮ:** ಅದೇಕೆ ನಿನಗೆ ಶಿವಭಕ್ತರ ಮೇಲೆ ಅಷ್ಟೊಂದು ತಿರಸ್ಕಾರ?

**ಕಿರಾತಕ ರಾಜ:** ಆ ನಿನ್ನ ಶಿವ, ಮನುಷ್ಯನಾಗಿದ್ದ ನನ್ನನ್ನು ರಾಕ್ಷಸನನ್ನಾಗಿ ಮಾಡಿದ. ಎಷ್ಟು ಬೇಡಿಕೊಂಡರೂ ಬಿಡದೆ, ನನ್ನ ಮಡದಿಯನ್ನೂ ಮಗುವನ್ನೂ ಕಿತ್ತುಕೊಂಡ. ಒಂದು ಕಾಲದಲ್ಲಿ ಶಿವಭಕ್ತನಾಗಿದ್ದ ನಾನು ಇಂದು ಶಿವ ದ್ವೇಷಿಯಾಗಿ ಶಿವಭಕ್ತರ ಬೇಟೆ ಯಾಡುತ್ತಿದ್ದೇನೆ. ಈ ಗುಹೆಯೊಳಗಿನಿಂದ ಆರ್ತನಾದ ಕೇಳಿಸುವುದಿಲ್ಲವೆ? ಅವರೆಲ್ಲಾ ಶ್ರೀಶೈಲಕ್ಕೆ ಹೊರಟಿದ್ದ ಶಿವಭಕ್ತರು. ನೀನು ಐದನೆಯವನು. ನೀವೈದು ಜನರನ್ನು ನಾಳಿನ ಸೂರ್ಯೋದಯಕ್ಕೆ, ಹೂಂ… (*ಪಕ್ಕದಲ್ಲಿದ್ದ ಗಿಡವನ್ನು ಕಿತ್ತು ಕತ್ತಿ ಬೀಸಿ ತುಂಡರಿಸಿ ತೋರಿಸುವನು.*)

**ಅಲ್ಲಮ:** ಅದರಿಂದ ನಿನಗೆ ಸಂತೋಷ ಸಿಗುವುದಾದರೆ, ತಡವೇಕೆ ಸಹೋದರ? ನೋಡು, ಮೂಡಣ ದಿಕ್ಕು ಕೆಂಪೇರುತ್ತಿದೆ. ನಿಶೆ ನಿರ್ಗಮಿಸಿ ಉಷೆ ಆಗಮಿಸುತ್ತಿದ್ದಾಳೆ. ಎಲ್ಲಿ ವಧಾಸ್ಥಾನ? ನಡೆ ಹೋಗೋಣ, ಮೇಲೇರುತ್ತಿರುವ ರವಿ ನಿನ್ನ ಪೌರುಷವನ್ನೆಲ್ಲಾ ಜಗಕ್ಕೆ ಸಾರಲು ಸನ್ನದ್ಧನಾಗಿದ್ದಾನೆ, ನೋಡು.

**ಕಿರಾತಕ ರಾಜ:** ಏನಿದು ಅಚ್ಚರಿ! ಎಲ್ಲರೂ ಸಾವಿಗಂಜುವಾಗ, ನೀನು ಹೇಗೆ ತಾನೇ ನಿರ್ಭೀತನಾಗಿರುವೆ?

**ಅಲ್ಲಮ:** ಶಿವಭಕ್ತರಿಗೆ ಭಯವಿಲ್ಲವಯ್ಯ, ಸಾವಿಗಂಜದವನೇ ಶಿವಭಕ್ತ. ಸಾವಿನ ಅರ್ಥವನ್ನು, ಜೀವನದ ಅರ್ಥವನ್ನು ತಿಳಿಯದ ನೀನು ಹಿಂಸಾಮಾರ್ಗಕ್ಕೆ ಇಳಿದಿರುವೆ. ಆದರೆ ನಿನ್ನ ದೇಹವನ್ನೇ ನಿನಗೆ ರಕ್ಷಿಸಿಕೊಳ್ಳಲು ಆಗುತ್ತಿಲ್ಲ.

**ಕಿರಾತಕ ರಾಜ:** ಏನು! ನನ್ನ ದೇಹವನ್ನು ನಾನು ರಕ್ಷಿಸಿಕೊಳ್ಳಲಾರೆನೆ?

**ಅಲ್ಲಮ:** ಹಾಗಾದರೆ ಮೃತ್ಯುವನ್ನು ಜಯಿಸಬಲ್ಲೆಯೇನು?

**ಕಿರಾತಕ ರಾಜ:** ಹಾ, ಹಾ, ಹಾ. ಮೃತ್ಯು! (*ವ್ಯಂಗ್ಯವಾಗಿ*) ಕಣ್ಣಿಗೆ ಕಾಣದ, ಕೈಗೆ ಸಿಗದ, ಕಳ್ಳನಂತೆ ಬಂದು ಜೀವಗಳನ್ನು ಕೊಂಡೊಯ್ಯುವ ಮೃತ್ಯುವೂ ಒಬ್ಬ ಧೀರನೋ? ಅವನು ನನ್ನ ಮುಂದೆ ಒಮ್ಮೆ ಬರಲಿ. ಆಗ ನೋಡುವೆಯಂತೆ, ಯಾರು ಜಯಿಸುವರೆಂದು.

**ಅಲ್ಲಮ:** ಮೂರ್ಖ ! ಪ್ರಕಟವಾಗದಿರುವ ವ್ಯಕ್ತಿಯ ಅಸ್ತಿತ್ವವನ್ನು ಸಂಶಯಿಸುವೆಯಾ?

**ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೆ?**
**ಬೀಜದೊಳಗಣ ವೃಕ್ಷ ಉಲಿಯಬಲ್ಲುದೆ?**
**ತೋರಲಿಲ್ಲಾಗಿ ಬೀರಲಿಲ್ಲಾರಿಗೆಯು**
**ಗುಹೇಶ್ವರಾ, ನಿಮ್ಮ ನಿಲವ**
**ಅನುಭವಸುಖ ಬಲ್ಲ.**

ಕಿರಾತಕ, ನಿನಗೆ ಸಾಧ್ಯವಿದ್ದರೆ ಮೃತ್ಯುವನ್ನು ಅಂದರೆ ಕಾಲನನ್ನು ಹುಡುಕಿಕೊಂಡು ಹೋಗಿ ಆತನನ್ನು ಜಯಿಸು. ಆದರೆ, ಅದಕ್ಕೆ ಮೊದಲು, ನಿನ್ನೊಳಗೇ ಇರುವ ನಿನ್ನ ಶತ್ರುಗಳನ್ನು ಜಯಿಸು.

**ಕಿರಾತಕ ರಾಜ:** ನನ್ನ ದೇಹವನ್ನು ಹೊಕ್ಕಿರುವ ಶತ್ರುಗಳೊ? ನಿನಗೆಲ್ಲೋ ಭ್ರಾಂತಿ.

**ಅಲ್ಲಮ:** ನಿನ್ನನ್ನು ಆವರಿಸಿರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಆರು ಶತ್ರುಗಳನ್ನು ಮೊದಲು ಜಯಿಸು. ಆಮೇಲೆ ಎಲ್ಲರಿಗೂ ಸಾವನ್ನು ತರುವ ಆ ಕಾಲನನ್ನು ಅರಸಲು ಹೋಗು. ನಾನು ಹೇಳಿದ ಆ ಆರು ಶತ್ರುಗಳು ನಿನ್ನನ್ನು ಜಯಿಸಿರುವಾಗ, ನೀನು ಲೋಕಾಧಿಪತಿಯಾಗಿದ್ದೂ ಪ್ರಯೋಜನವೇನು?

**ಕಿರಾತಕ ರಾಜ:** ನನಗೊಂದೂ ಅರ್ಥವಾಗುತ್ತಿಲ್ಲ. ಕಾಲನನ್ನು ಹುಡುಕಿಕೊಂಡು ಬರಲು ಹೇಳುತ್ತೀಯೆ. ಅದೇ ಸಮಯದಲ್ಲಿ ನನ್ನ ದೇಹವನ್ನು ಹೊಕ್ಕಿರುವ ಶತ್ರುಗಳನ್ನೂ ಜಯಿಸಲು ಹೇಳುತ್ತಿರುವೆ!

**ಅಲ್ಲಮ:** ಅದೋ, ಅಲ್ಲಿ ಹೋಗುತ್ತಿರುವ ಆ ಸಲಗವನ್ನು ನೋಡು. ಅದು ಎಷ್ಟು ಗಾಂಭೀರ್ಯದಿಂದ, ಯಾರಿಗೂ ಹೆದರದೆ ಹೋಗುತ್ತಿದೆ! ನಿನಗಿಂತ ಆ ಕಾಡುಪ್ರಾಣಿ ಎಷ್ಟೋ ಮೇಲು. ಆ ಪ್ರಾಣಿಯಾದರೋ ಅಗತ್ಯವಿಲ್ಲದೆ ಯಾರಿಗೂ ಉಪದ್ರವ ಕೊಡದು. ತನಗೆ ತೊಂದರೆ ಕೊಡದವರ ತಂಟೆಗೂ ಹೋಗದು. ಅದು ಸತ್ತರೂ, ಅದರ ದಂತಕ್ಕೆ, ಅದರ ಚರ್ಮಕ್ಕೆ ಬಹಳಷ್ಟು ಬೆಲೆ ಇದೆ. ನೀನು ಸತ್ತರೆ, ನಿನ್ನ ದೇಹ ನರಿನಾಯಿಗಳಿಗೆ ಅಲ್ಪಸ್ವಲ್ಪ ಆಹಾರವಾಗ ಬಹುದು, ಅಷ್ಟೆ. ನಿನ್ನ ಕಳೇಬರಕ್ಕೆ ಬೆಲೆ ಎಷ್ಟೆಂದು ಹೇಳಬಲ್ಲೆಯಾ?

**ಕಿರಾತಕ ರಾಜ:** ಎಲವೋ ಮೂರ್ಖ ಸಂನ್ಯಾಸಿ, ಏನೇನೋ ಹೇಳಿ ನನ್ನ ತಲೆಕೆಡಿಸುತ್ತಿರುವೆಯಲ್ಲ! ಆ ಕಾಡುಪ್ರಾಣಿ ಗಿಂತಲೂ ಕೀಳಾಗಿರುವೆನೇ ನಾನು!

**ಅಲ್ಲಮ:** ಇನ್ನೂ ಸಂಶಯವೇ, ಕಿರಾತಕ. ಆನೆ ಏಕೆ? ಆ ಜಿಡಿನಮರಿ ನೋಡು. ಅದು ಜೀವಂತ ಇರುವಾಗಲೂ, ಸತ್ತ ಮೇಲೂ ಪ್ರಯೋಜನಕ್ಕೆ ಬರುತ್ತದೆಂದು, ಅದನ್ನು ಬೆಲೆಕೊಟ್ಟು ಕೊಳ್ಳುವವರಿದ್ದಾರೆ. ಆದರೆ ನೀನು! ನೀನು ಬದುಕಿರುವಾಗ ನಿನ್ನನ್ನು ನೋಡಿ ಜನರು ಹೆದರಿ ಓಡುವರು. ಸತ್ತ ಮೇಲೆ ನಿನ್ನ ಶವಕ್ಕೆ ಕಲ್ಲೆಸೆಯುವರು. ಈಗ ಹೇಳು, ಯಾರು ಮೇಲೆಂದು?

*(ಅಲ್ಲಮ ಕಿರಾತಕ ರಾಜನ ಕೈಹಿಡಿದುಕೊಳ್ಳುವನು.)*

**ಕಿರಾತಕ ರಾಜ:** ಹಾಗಾದರೆ, ಈಗ ನಾನೇನು ಮಾಡಬೇಕೆನ್ನುವೆ?

**ಅಲ್ಲಮ:** ಐವರು ಶಿವಭಕ್ತರನ್ನು ಬಲಿಕೊಡಲು ಹೊರಟಿರುವೆಯಲ್ಲಾ, ಹೂಂ, ನಡೆ. ಶೀಘ್ರವೇ ಅವರ ವಧೆ ಮಾಡು.

**ಕಿರಾತಕ ರಾಜ:** ಇಲ್ಲ, ಈಗ ಅದು ನನ್ನಿಂದ ಸಾಧ್ಯವಿಲ್ಲ. ನಿನ್ನ ಪ್ರತಿ ಮಾತೂ ನನ್ನ ನರನಾಡಿಗಳಲ್ಲಿ ಸಂಚರಿಸಿ ನನ್ನನ್ನು ವಿಚಲಿತಗೊಳಿಸುತ್ತಿದೆ. ಯಾರ ಮುಂದೆಯೂ ಬಾಗದ ನನ್ನ ತಲೆಯು, ನಿನ್ನ ಮುಂದೆ ಬಾಗುತ್ತಿದೆ. ನಿನ್ನ ಈ ಅಮೃತಸ್ಪರ್ಶವು ಯಾವುದೋ ಅವರ್ಣನೀಯವಾದ ಪ್ರೀತಿಯ ಹೊನಲನ್ನು ನನ್ನ ಇಡೀ ದೇಹದಲ್ಲಿ ಹರಿಸಿದಂತೆ ಭಾಸವಾಗುತ್ತಿದೆ. ಕಲ್ಲಾಗಿರುವ ನನ್ನ ಮನಸ್ಸು, ಮೃದುವಾಗಿ, ನೀರಾಗಿ ಹರಿಯುವಂತಾಗಿದೆ. ನೀನೆಲ್ಲಿಂದ ಬಂದೆಯೋ, ಎಲ್ಲಿಗೆ ಹೋಗುವೆಯೋ, ಒಂದೂ ನಾನರಿಯೆ. ಆದರೆ, ನಿನ್ನ ಮುಂದೆ, ಇಂದೇಕೆ ನನಗೆ ಹೀಗಾಗುತ್ತಿದೆ?

**ಅಲ್ಲಮ:** ಅದಕ್ಕೇ ಹೇಳುತ್ತೇನೆ, ಕೇಳು. ನಿನ್ನನ್ನು ನೀನು ತಿಳಿದುಕೋ, ನಿನ್ನ ಈ ನಶ್ವರ ದೇಹದ ಒಳಗಿರುವ ನಿತ್ಯಸತ್ಯದ ಶಕ್ತಿಸ್ವರೂಪವನ್ನು ಅರಿತುಕೋ.

**ಕಿರಾತಕ ರಾಜ:** ಆ ಶಕ್ತಿಯ ಹೆಸರೇನು?

**ಅಲ್ಲಮ:** ಶಕ್ತಿಯನ್ನು ಯಾವ ಹೆಸರಿನಿಂದ ಕರೆದರೇನು? ಆ ಶಕ್ತಿಯನ್ನು ಶಿವನೆನ್ನು, ಇಲ್ಲವೆ ನಿನ್ನ ಹೆಸರೇ ಆದ ಕಿರಾತಕ ರಾಜನೆನ್ನು. ಇಲ್ಲವೇ, ಗುಹೇಶ್ವರಾ ಎನ್ನು. ನಿನಗೆ ಬೇಕಾದ ಹೆಸರಿನಿಂದ ಅದನ್ನು ಕರೆ.

**ಕಿರಾತಕ ರಾಜ:** ಅಯ್ಯಾ, ಇಲ್ಲಿ ಕೇಳು, ಶಿವನ ಮೇಲೆಯೇ ಹಗೆ ಸಾಧಿಸಲು ಹೊರಟಿರುವ ನನಗೆ, ಶಿವನನ್ನೇ ಆರಾಧಿಸಲು ಹೇಳುತ್ತಿರುವೆಯಲ್ಲಾ!

**ಅಲ್ಲಮ:** ಇದಕ್ಕಾಗಿಯೇ ಹೇಳಿದ್ದು, ನಿನ್ನೊಳಗಿನ ಆರು ಶತ್ರುಗಳನ್ನು ಗೆಲ್ಲು ಎಂದು. ಅಂದು ನಿನಗೆ ಶಿವನು ದುಃಖ ಕೊಟ್ಟಿರುವನೆಂದು ಭ್ರಮಿಸಿ ನೀನು ಶಿವದ್ವೇಷಿಯಾದೆ. ಶಿವಭಕ್ತರ ಹತ್ಯೆಗೆ ತೊಡಗಿದೆ. ಕೊಲೆಗಡುಕ, ದರೋಡೆ ಕೋರ, ಕಿರಾತಕ ಎನಿಸಿದೆ. ನೀನು ಮಾಡಿದ ಕರ್ಮವನ್ನು ನೀನು ಅನುಭವಿಸುತ್ತಿರುವೆ. ಅದಕ್ಕೆ ಶಿವನನ್ನು ಏಕೆ ದೂಷಿಸುವೆ?

**ಚರಾಚರವೆಂಬುದೊಂದು ಕಿಂಚಿತ್**
**ಚತುರ್ಯುಗವೆಂಬುದೊಂದು ಕಿಂಚಿತ್**
**ಅಪ್ಪುದೆಂಬುದೊಂದು ಕಿಂಚಿತ್**
**ಆಗದೆಂಬುದೊಂದು ಕಿಂಚಿತ್**
**ತಾನು ಶುದ್ಧವಾದ ಶರಣರಿಗೆ**
**ಗುಹೇಶ್ವರನೆಂಬುದೊಂದು ಕಿಂಚಿತ್ !**

**ಕಿರಾತಕ ರಾಜ:** ನಾನು ಪ್ರಾಣಿಗಳನ್ನು ಬೇಟೆಯಾಡುವವನು, ನಿಜ. ಆದರೆ ನೀನು ನನ್ನನ್ನೇ ಬೇಟೆಯಾಡಿಬಿಟ್ಟೆ. ಶಿವಭಕ್ತರ ಬೇಟೆಯಾಡುವ ನನ್ನ ಶಪಥವನ್ನು ನೀನು ಮುರಿದು ಹಾಕಿಬಿಟ್ಟೆ. ನನ್ನನ್ನು ನೀನು ಕೊಂದೆ! ನನ್ನನ್ನು ನೀನು ಕೊಂದೆ! ನೀನು ಕೊಲೆಗಾರ! ನೀನೊಬ್ಬ ಕೊಲೆಗಾರ!

**ಅಲ್ಲಮ:** ಮೇಲಿನ ಮೂರ್ಖ ನುಡಿಗಳನ್ನು ಬಿಟ್ಟು, ಅದಕ್ಕಿಂತ ಹೆಚ್ಚಿನ ಶಪಥವೊಂದನ್ನು ಮಾಡು, ಸಹೋದರಾ.

**ಕಿರಾತಕ ರಾಜ:** ಕೊಲೆಗಡುಕನಾದ ನನ್ನನ್ನು ಸಹೋದರನೆನ್ನುವ ನೀನು ಮಹಾಯೋಗಿಯೇ ಆಗಿರಬೇಕು. ಈಗ ನಾನೇನು ಮಾಡಬೇಕೆನ್ನುವೆ?

**ಅಲ್ಲಮ:** ಇದೋ ಕೇಳು, ನೀನು ಗೈಯಬೇಕಾದ ಶಪಥದ ವಿಧಾನ.

**ಕೋಪಮಂ ಬಿಟ್ಟು**
**ಭ್ರಾಂತಿ ಭ್ರಮೆಯಂ ಬಿಟ್ಟು!**
**ಜಂಗಮವಾಗಬೇಕು ಕಾಣಿರೇ**
**ಮರುಳುಗಳಿರಾ!**
**ಇಂತೀ ಕಡುಲೋಭದ ರುಚಿ ಹಿಂಗಿ!**
**ಜಂಗಮವಾದಲ್ಲದೆ**
**ಭವ ಹಿಂಗದು ಕಾಣಾ ಗುಹೇಶ್ವರಾ!**

ಸಹೋದರಾ, ಕಿರಾತಕ ರಾಜ, ನಿನ್ನ ಹಿಂಸಾರೂಪದ ಕೃತ್ಯಗಳನ್ನು ತ್ಯಜಿಸಿ, ಅಹಿಂಸೆಯನ್ನು ಪಾಲಿಸು. ಇದೇ ನೀನೀಗ ಮಾಡಬೇಕಾದ ಶಪಥ, ಕೈಗೊಳ್ಳಬೇಕಾದ ವ್ರತ, ಏನೆನ್ನುತ್ತೀಯಾ?

**ಕಿರಾತಕ ರಾಜ :** ನಿನ್ನ ಮಾತಿನಲ್ಲಿ ಅದೇನೋ ಮೋಡಿ ತುಂಬಿದೆ. ನೀನು ಹೇಳುವುದನ್ನು ನಾನು ಅಲ್ಲಗಳೆಯಲಾರೆ. ಅದು ನನಗೆ ಸಾಧ್ಯವೂ ಆಗುತ್ತಿಲ್ಲ. ಈಗ ನಾನು ಹಿಂಸೆಯನ್ನು ತೊರೆಯುತ್ತೇನೆ. ಆದರೆ, ನನ್ನ ಹಿಂದಿನ ಪಾಪಗಳನ್ನು ಆ ನಿನ್ನ ಶಿವ ಮನ್ನಿಸುವನೋ?

**ಅಲ್ಲಮ:** ಮನ್ನಿಸುವನು, ಅವನು ನಿನ್ನ ಶಿವ ಮಾತ್ರ ಅಲ್ಲ. ಎಲ್ಲರ ಶಿವ. ನಿನ್ನ ಹೃದಯದಲ್ಲೂ ಅವನೇ ಇದ್ದಾನೆ. ನನ್ನ ಹೃದಯದಲ್ಲೂ ಅವನೇ ಇದ್ದಾನೆ. ಎಲ್ಲೆಲ್ಲೂ ಅವನೇ ಇದ್ದಾನೆ. ಭಕ್ತರ ತಪ್ಪು ಗಳನ್ನು ಕ್ಷಮಿಸುವುದೇ ಅವನ ರೀತಿ.

*(ಕಿರಾತಕ ರಾಜ ಅಲ್ಲಮನ ಪಾದಗಳ ಮೇಲೆ ಬೀಳುವನು.)*

**ಕಿರಾತಕ ರಾಜ :** ಸ್ವಾಮಿ, ನಿನಗೆ ಶರಣು ಬಂದಿದ್ದೇನೆ. ನನ್ನ ಮಂದಬುದ್ಧಿ ಯಿಂದ ಅನೇಕ ಪಾಪಗಳನ್ನು ಮಾಡಿ ದ್ದೇನೆ. ದಯವಿಟ್ಟು ನನ್ನನ್ನು ಕಾಪಾಡು.

**ಅಲ್ಲಮ:** ಮೇಲೇಳು ತಮ್ಮಾ, ಇಲ್ಲಿ ಕೇಳು,

**ಎಣ್ಣೆ ಬೇರೆ, ಬತ್ತಿ ಬೇರೆ**
**ಎರಡೂ ಕೂಡಿ ಸೊಡರಾಯಿತ್ತು.**
**ಪುಣ್ಯ ಬೇರೆ, ಪಾಪ ಬೇರೆ**
**ಎರಡೂ ಕೂಡಿ ಒಡಲಾಯಿತ್ತು**
**ಮಿಗಬಾರದು, ಮಿಗದಿರಬಾರದು**
**ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು**
**ಕಾಯಗುಣವಳಿದು**
**ಮಾಯಾಜ್ಯೋತಿ ವಾಯುವ**
**ಕೂಡದ ಮುನ್ನ**
**ಭಕ್ತಿಯ ಮಾಡಬಲ್ಲಾತನೇ ದೇವ ಗುಹೇಶ್ವರ**